# ನೆನಪ ಹಾದಿಯ ಹೊರಳು ನೋಟ...

**ಕೂಡು ಕುಟುಂಬದಲ್ಲಿ ಕಷ್ಟದಿಂದ ಜೀವನ ಸಾಗಿಸಿ ಮನೆ ತುಂಬ ಇದ್ದ ಮಕ್ಕಳಿಗೆಲ್ಲ ವಿದ್ಯಾಭ್ಯಾಸ ಮಾಡಿಸಿ ದಡ ಮುಟ್ಟಿಸಿದ ಅಪ್ಪ ಅಮ್ಮನ ಸಾಹಸ ಶ್ಲಾಘನೀಯ. ಈಗ ಅವರಿಲ್ಲದಿದ್ದರೂ ಆ ನೆನಪಿನಲ್ಲೇ ಬಾಳುವುದು ಜೀವನದ ಸಾರ್ಥಕತೆ ಎನಿಸಿದೆ.**

**■ ಪುಷ್ಪಾ ಎನ್.ಕೆ. ರಾವ್**



ಬಾಲ್ಯದಿಂದ ಬೆಳೆದು ಬಂದ ನೆನಪುಗಳೆಲ್ಲ ಮಧುರವಾದದ್ದೇ. ಸುಮಾರು ಐದು ದಶಕಗಳನ್ನು ಕಳೆದ ಬಳಿಕ ಸವೆಸಿದ ಹಾದಿಯನ್ನು ಹಿಂತಿರುಗಿ ನೋಡುವುದರಲ್ಲೂ ಆನಂದ ಸಿಗುತ್ತದೆ. ನಮ್ಮ ಮೂಲ ಸ್ಥಳ ಉಡುಪಿಯಾದರೂ ಹೊಟ್ಟೆಪಾಡಿಗಾಗಿ ಕೆಲಸವನ್ನರಸುತ್ತಾ ಬಂದ ತಂದೆಯವರು ಮೈಸೂರು ಜಿಲ್ಲೆ ಹುಣಸೂರಿನಲ್ಲಿ ಹೊಟೇಲ್ ಉದ್ಯಮ ಪ್ರಾರಂಭಿಸಿದ್ದರು. ಆಗಿನ ಕಾಲದಲ್ಲಿ ಕೇವಲ ಒಬ್ಬರ ದುಡಿಮೆಯಿಂದ ಏಳು ಮಕ್ಕಳ ತುತ್ತಿನ ಚೀಲ ತುಂಬುವುದು ಸುಲಭದ ಮಾತಾಗಿರಲಿಲ್ಲ. ಹೇಗಾದರೂ ಜೀವನ ನಿರ್ವಹಿಸುತ್ತಾ ಹದಿನಾಲ್ಕು ವರ್ಷಕ್ಕೆ ಹಿರಿಯಕ್ಕನ ಮದುವೆಯನ್ನು ಮಾಡಿ ಮುಗಿಸಿಬಿಟ್ಟರು. ಎರಡನೇ ಅಕ್ಕನ ಮದುವೆಯ ತಯಾರಿಯಲ್ಲಿದ್ದಾಗ ತಂದೆಯವರು ಅಕಸ್ಮಾತ್ತಾಗಿ ತೀರಿಕೊಂಡಾಗ ತಾಯಿಯವರು ಧೈರ್ಯವಹಿಸಿ ಚಿಕ್ಕಪ್ರಾಯದ ಅಣ್ಣನವರ ಸಹಕಾರದಿಂದ ಮನೆಯಲ್ಲಿಯೇ ಹೊಟೇಲ್ ಅನ್ನು ಪ್ರಾರಂಭಿಸಿ ಎಲ್ಲರನ್ನು ದಡ ಮುಟ್ಟಿಸಲು ಸೆರಗು ಕಟ್ಟಿ ನಿಂತರು.

ಆಗಿನ ಕಾಲದಲ್ಲಿ ಹೆಣ್ಣುಮಕ್ಕಳ ಜವಾಬ್ದಾರಿಯನ್ನು ಆದಷ್ಟು ಬೇಗ ಕಳೆದುಕೊಳ್ಳಬೇಕಾಗಿತ್ತು. ಹಾಗಾಗಿ ಎರಡನೆಯವಳಿಗೆ ಹದಿನೆಂಟು ತುಂಬುತ್ತಿದ್ದಂತೆ ತಾನಾಗಿಯೇ ಬಂದ ಒಂದು ಸಂಬಂಧವನ್ನು ಒಪ್ಪಿಕೊಂಡರು. ಕಾಫಿ ಎಸ್ಟೇಟಿನ ವರನ ಜೊತೆ ಮದುವೆ ನಿಶ್ಚಯವಾಯಿತು. ನಮ್ಮ ಭಾವನವರದ್ದು ಕೂಡು ಕುಟುಂಬ. ವಿದ್ಯುತ್ ಸಂಪರ್ಕವಿಲ್ಲದ ಹಳ್ಳಿ. ನಾಲ್ಕು ಜನ ಅಣ್ಣ ತಮ್ಮಂದಿರು ನಾಲ್ಕು ಜನ ತಂಗಿಯರು ಜೊತೆಗೆ ತಂದೆ, ಚಿಕ್ಕಮ್ಮ. ಇಷ್ಟು ದೊಡ್ಡ ಸಂಸಾರದ ಜೊತೆ ಪಟ್ಟಣದಲ್ಲಿ ಬೆಳೆದ ಅವಳು ಹೊಂದಿಕೊಳ್ಳುತ್ತಾಳೋ ಇಲ್ಲವೋ ಎಂಬ ಸಂಶಯ. ಆದರೆ ಒಳ್ಳೆಯ ಸಂಬಂಧ ಬಿಡಲು ಇಷ್ಟವಿಲ್ಲ ಅವಳ ಹಣೆಯಲ್ಲಿ ಅದೇ ಬರೆದಿತ್ತೋ ಏನೋ ಅಂತೂ ಮದುವೆಯಾಯಿತು.

ಹೇಳಿ ಕೇಳಿ ಮಲೆನಾಡು. ಬಂದು ಹೋಗುವವರು ತುಂಬ ಜನ. ಹಳ್ಳಿಯ ಹಿರಿಯ ಮನೆಯಾದ್ದರಿಂದ ಬಂದವರಿಗೆ ಊಟೋಪಚಾರ ಮಾಡಿ ಕಳುಹಿಸಲೇಬೇಕಾದದ್ದು ಅವರ ಗುಣ. ಹಾಗಾಗಿ ವರ್ಷದ 365 ದಿವಸಗಳಲ್ಲೂ ಮನೆ ನೆಂಟರಿಂದ ತುಂಬಿರುತ್ತಿತ್ತು. ಹಬ್ಬ, ಹರಿದಿನ, ವಾರ್ಷಿಕ ಪೂಜಾವಿಧಿಗಳು ಎಲ್ಲವನ್ನು ನಿರ್ವಹಿಸಲೇಬೇಕಾಗಿತ್ತು. ಮಡಿವಂತ ಸಂಪ್ರದಾಯ ಬೇರೆ. ಇಂಥ ವಾತಾವರಣದ ಮಧ್ಯೆ ಅಕ್ಕ ಕಳೆದ ತಿಂಗಳು ತನ್ನ ಮದುವೆಯ ಐವತ್ತು ಸಂವತ್ಸರಗಳನ್ನು ಪೂರೈಸಿದ್ದಾಳೆ. ಅವಳಿಗೆ ನಾಲ್ಕುಜನ ಹೆಣ್ಣುಮಕ್ಕಳೇ ಆದರೂ ಎಲ್ಲರೂ ವಿದ್ಯಾವಂತರಾಗಿ ಉದ್ಯೋಗದಲ್ಲಿದ್ದಾರೆ. ಮದುವೆಯ ಸುವರ್ಣಮಹೋತ್ಸವ ಒಂದು ಅಪರೂಪದ ಕ್ಷಣ. ಅದು ಎಲ್ಲರಿಗೂ ಪ್ರಾಪ್ತಿಯಾಗುವುದಿಲ್ಲ. ಪತಿ–ಪತ್ನಿ ಇಬ್ಬರೂ ಇದ್ದು, ಯಾರಿಗೂ ತೀವ್ರ ಅನಾರೋಗ್ಯ ಕಾಡದೆ ಇಬ್ಬರೂ ಸುಖ ಸಂತೋಷದಿಂದ ಇರುವುದು ಒಂದು ಉತ್ತಮ ಸನ್ನಿವೇಶವೇ ಹೌದು. ಹಿರಿಯಕ್ಕನಿಗೆ ಅದನ್ನು ಸಂಭ್ರಮಿಸಲು ಒಂದು ವರ್ಷವಿದೆ ಎನ್ನುವಾಗ ಭಾವ ತೀರಿಕೊಂಡದ್ದು ಬೇಸರದ ಸಂಗತಿ.

ಅಕ್ಕ, ಭಾವ, ಮಕ್ಕಳು ಎಲ್ಲ ಸೇರಿ ಈ ಸಂಭ್ರಮದ ಆನಂದವನ್ನು ಸವಿಯಲು ನಿಶ್ಚಯಿಸಿದರು. ಒಂದು ಔತಣಕೂಟ ಏರ್ಪಡಿಸಿದ್ದರು. ಎಷ್ಟೋ ವರ್ಷಗಳ ನಂತರ ಅಕ್ಕನ ಕಡೆಯ ಬಳಗವೆಲ್ಲ ಒಟ್ಟಾಗಿದ್ದೆವು. ಕೆಲವರು ವಿದೇಶದಲ್ಲಿದ್ದವರು ಅವರೆಲ್ಲ ಬರಲಾಗದಿದ್ದರೂ ಅಕ್ಕ, ಅಣ್ಣ, ತಮ್ಮಂದಿರು ಅವರ ಮಕ್ಕಳು, ಮೊಮ್ಮಕ್ಕಳು... ಹೀಗೆ ಹಲವಾರು ಜನರು ಒಟ್ಟಾಗಿ ಆ ರಸಕ್ಷಣಗಳನ್ನು ಅನುಭವಿಸಿ ಸಂತೋಷಪಟ್ಟೆವು. ಅಪ್ಪ, ಅಮ್ಮನಿಲ್ಲದ ಕೊರತೆ ಒಂದು ಕ್ಷಣ ಕಾಡಿದ್ದಂತೂ ನಿಜ.

ಏನೇ ಆಗಲಿ, ಬೆಂಗಳೂರಿನಂಥ ಯಾಂತ್ರಿಕ ಬದುಕಿನಲ್ಲಿ ಇಂಥ ರಸನಿಮಿಷಗಳನ್ನು ಆಸ್ವಾದಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮನಸ್ಸಿನ ಒತ್ತಡವನ್ನು ಒಂದು ದಿನದ ಮಟ್ಟಿಗಾದರೂ ದೂರಸರಿಸುವುದು ಮುಖ್ಯವೆಂದು ಅನ್ನಿಸಿತು. ಅವಳ ಮಗಳು ತೆಗೆದ ಈ ಔತಣಕೂಟದ ಒಂದು ಭಾವಚಿತ್ರ ಎಲ್ಲರ ಪುಟ್ಟ ಪೆಟ್ಟಿಗೆಯಲ್ಲಿ ಇಂದು ಅಡಕವಾಗಿದೆ. ಹಳೆಯ ನೆನಪು ಕಾಡಿದಾಗ ನೋಡಿ ಸಂತೋಷಪಟ್ಟುಕೊಳ್ಳುತ್ತೇವೆ. ■